

ಜನ ಮೆಚ್ಚುಗೆ ಪಡೆದಿರುವ ಸರಣಿ ವ್ಯಂಗ್ಯಚಿತ್ರಗಳು (ಸ್ಟ್ರಿಪ್ ಕಾರ್ಟೂನ್ಸ್)

ಸಂಭಾವನೆ ಕೊಡಲು ಮುಂದಾದರಂತೆ. ರಾವ್‌ಬೈಲರು ನಕ್ಕು, 'ಬಳಸಿದ ಕವರುಗಳಿಗೆ ಹಣ ಬೇಡ'ವೆಂದು ಹೇಳಿ ಕೈಕುಲುಕಿ ಬಂದರಂತೆ.

ಈ ನಡುವೆ **Illustrated Weekly, Times, Express, Reader's Digest, Debonair** ಮೊದಲಾದ ನಾಡಿನ ಪ್ರಮುಖ ಪತ್ರಿಕೆಗಳಲ್ಲಿ ರಾವ್‌ಬೈಲರ ಚಿತ್ರಗಳು ತಮ್ಮ ಅನನ್ಯತೆಯಿಂದ ಗಮನ ಸೆಳೆಯುತ್ತಿದ್ದವು. ಕನ್ನಡದಲ್ಲಿ ಅವು ಎಂಬತ್ತರ ದಶಕದಲ್ಲಿ ಕಾಣಿಸಿಕೊಳ್ಳತೊಡಗಿದವು.

ರಾವ್‌ಬೈಲರ ಪಯಣದ ಮುಂದಿನ ಪಡಾವು ಧಾರವಾಡದಲ್ಲಿ ಬಿದ್ದಿತು. ತೊಂಬತ್ತರ ದಶಕದ ಅಂತ್ಯದಲ್ಲಿ ಏಕತಾನವೆಂದು ಅನಿಸತೊಡಗಿದ ನೌಕರಿಯಿಂದ ಸ್ವಯಂನಿವೃತ್ತಿ ಪಡೆದು ಮುಂಬಯಿ ತೊರೆದು ಮಡದಿ ಕುಮುದಿನಿಯವರ ತವರೂರು ಧಾರವಾಡಕ್ಕೆ ತೆರಳಿದರು. ಅಲ್ಲಿ ತಮ್ಮದೇ ಆದ ಉಪವನದಲ್ಲಿ ಗಿಡಮರಗಳ ಆರೈಕೆ ಮಾಡುತ್ತ, ಸ್ವಂತ ಖುಷಿಗಾಗಿ 'ಕೊಲಾಜ್'ನಲ್ಲಿ ಪ್ರಯೋಗಗಳನ್ನು ಮಾಡುತ್ತ ಮಡದಿ ಮಕ್ಕಳು ಮೊಮ್ಮಕ್ಕಳು ಅಳಿಯರೊಂದಿಗೆ ಕುಟುಂಬವತ್ಸಲ ಜೀವನ ನಡೆಸಿದರು. ಇತ್ತೀಚಿನ ವರ್ಷಗಳಲ್ಲಿ ಬೆಂಗಳೂರು ಸೇರಿದ್ದರು. ಎಲ್ಲಿದ್ದರೂ ತಮ್ಮ ಸೃಜನಶೀಲತೆ ಮತ್ತು ಜೀವನೋತ್ಸಾಹಗಳನ್ನು ಕಳೆದುಕೊಳ್ಳಲಿಲ್ಲ. ಕೊನೆಯ ದಿನಗಳಲ್ಲಿ ಎಂಬತ್ತೊಂದರ ಹೊಸ್ತಿಲಲ್ಲಿ, ಆಸ್ಪತ್ರೆಯ ಕೋಣೆಯ ಮಾತಾಡಲಾಗದ ನಿರ್ವಿಣ್ಣತೆಯಲ್ಲೂ ತಮ್ಮನ್ನು ಕಾಣಲು ಬಂದ ಮಿತ್ರರನ್ನು ಕಂಡು ಮುಗುಳುನಗದೇ ಇರಲಿಲ್ಲ.

ತುಂಬುಜೀವನದ ಉತ್ಸವವನ್ನು ಮುಗಿಸಿ ಬೇರೊಂದು ಲೋಕಕ್ಕೆ ತೆರಳಿದ ಕಲಾತಪಸ್ವಿ ನಮಗೆ ಕಾಡುವ, ಒಳಗನ್ನು ತಾಕುವ ಮೋಹಕ ಚಿತ್ರಗಳನ್ನು ಬಿಟ್ಟುಹೋಗಿದ್ದಾರೆ.


## ಶರದ ಸೌಕೂರ

ಮುಂಬಯಿಯಲ್ಲಿ ಹುಟ್ಟಿ ಉತ್ತರ ಕನ್ನಡದ ಹೊನ್ನಾವರದಲ್ಲಿ ಪ್ರಾಥಮಿಕ, ಮಾಧ್ಯಮಿಕ ಮತ್ತು ಕಾಲೇಜು ಶಿಕ್ಷಣಗಳನ್ನು ಮುಗಿಸಿ ಉದ್ಯೋಗ ನಿಮಿತ್ತ ಮತ್ತೆ ಮುಂಬಯಿ ಸೇರಿದ ಶರದ ಸೌಕೂರ ಕಾರ್ಪೊರೇಶನ್ ಬ್ಯಾಂಕಿನಲ್ಲಿ ಮ್ಯಾನೇಜರ್ ಆಗಿ ನಿವೃತ್ತರು. ಈಗ ಮುಂಬಯಿಯಲ್ಲಿ ನೆಲೆಸಿದ್ದಾರೆ. ಕಳೆದ ಹಲವು ದಶಕಗಳಲ್ಲಿ ಅವರ ಬಿಡಿಬರಹ, ಕತೆ, ಕವಿತೆ, ಅನುವಾದಗಳು ವಿವಿಧ ಪತ್ರಿಕೆಗಳಲ್ಲಿ ಪ್ರಕಟವಾಗಿವೆ.